ಸೇರಿಸಿಕೊಂಡಿದ್ದ. ಶಾಲೆಗಾಗಿ ಅವಳು ಮಾಡಿದ ಪ್ರತಿಭಟನೆ, ಉಪವಾಸ ಸತ್ಯಾಗ್ರಹಗಳು ಅವನ ಮನ ಕರಗಿಸಿರಲಿಲ್ಲ. ಚಂಪಾಳ ಹಟ ಅಪ್ಪನ ಮೊಂಡುತನದ ಎದುರು ಸೋತುಹೋಗಿತ್ತು. ಅಷ್ಟು ಸುಲಭವಾಗಿ ಅವಳು ಸೋಲೊಪ್ಪಿರಲಿಲ್ಲ. ಒಮ್ಮೆ ಅವಳ ಶಾಲೆಯ ಟೀಚರ್ ಮತ್ತು ಪ್ರಿನ್ಸಿಪಾಲರ ಬಳಿ ಹೋಗಿ ಹೇಗಾದರೂ ಅಪ್ಪನನ್ನ ಒಪ್ಪಿಸಿ ಎಂದು ಬೇಡಿದ್ದಳು. ಅವರು ಮಾರನೆ ದಿನವೇ ಬಂದು ದೇವಾನಿಗೆ ಸಮಾಧಾನದಿಂದ ಹೆಣ್ಣುಮಕ್ಕಳಿಗೆ ಓದು ಎಷ್ಟು ಮುಖ್ಯ, ಅದರಿಂದಾಗುವ ಪ್ರಯೋಜನಗಳನ್ನು ಬಿಡಿಸಿ ಹೇಳಿದ್ದರು. ಅವರನ್ನು ಗೌರವದಿಂದಲೇ ಮಾತಾಡಿಸಿ, ಒಳ್ಳೆಯ ದಿನ ನೋಡಿ ಮಗಳನ್ನ ಶಾಲೆಗೆ ಸೇರಿಸುತ್ತೀನಿ ಎಂದಿದ್ದ.

ಇಷ್ಟು ಸುಲಭವಾಗಿ ಚಂಪಾಳ ಅಪ್ಪ ಒಪ್ಪಿದ್ದು ಮನೆಯಲ್ಲಿ ಯಾರಿಗೂ ನಂಬಲಿಕ್ಕಾಗಲಿಲ್ಲ. ಅಜ್ಜಿ ಮಾತ್ರ, 'ನನ್ನ ಮಗ ಆಚೆಯಿಂದ ಒರಟು, ಆದ್ರೆ ಮನಸು ಹಾಲ್ಗೊವ ತರಹ ಮೃದು' ಎಂದಿದ್ದಳು. ಅಂದು ರಾತ್ರಿ ದೇವಾ ಸುರೆಯೇರಿಸಿ, ದೈತ್ಯನನ್ನು ಆವಾಹನೆ ಮಾಡಿಕೊಂಡು ಬಂದವನೇ, ಮನೆಯ ಹೆಣ್ಣುಮಕ್ಕಳ ಮೇಲೆ, ವಿಶೇಷವಾಗಿ ಹೆಂಡತಿ ಪುಟ್ಟಮ್ಮನ ಸೊಂಟ, ಬೆನ್ನುಗಳ ಮೇಲೆ ತನ್ನ ಪ್ರತಾಪ ತೋರಿಸಿದ್ದ. ಅದಾದ ಬಳಿಕ ಅವಳ ವಿದ್ಯಾಭ್ಯಾಸದ ಕುರಿತು ಮನೆಯಲ್ಲಿ ಯಾರೂ ಉಸಿರೆತ್ತಲಿಲ್ಲ.

ಇಷ್ಟಾದರೂ ಚಂಪಾಳ ಆಸೆ ಬತ್ತಿರಲಿಲ್ಲ. ಮಾಡಿದ್ದೆ ಮಾಡಿಕೊಂಡು, ನೋಡಿದ್ದೇ ನೋಡಿಕೊಂಡು, ಹಳೆಯ ಬೇರಿಗೆ ಅಂಟಿಕೊಂಡು ಇರುವುದು ಅವಳ ಜಾಯಮಾನವಲ್ಲ. ಹಾರಬೇಕು, ಹೊಸ ಅನುಭವಗಳ ಹೊಸ ಬದುಕು ಪಡೆಯಬೇಕು. ತನ್ನ ಶಾಲೆಯ ಟೀಚರ್‌ನಂತೆ, ಪ್ರಾಂಶುಪಾಲರಂತೆ ಆಗಬೇಕು. ಎಷ್ಟು ಗೌರವ ಅವರನ್ನ ಕಂಡರೆ ಎಲ್ಲರಿಗೂ. ಅಮ್ಮನ ಹಾಗೆ ಅವರು ಒದೆಸಿಕೊಳ್ಳುವುದಿಲ್ಲ. ಪಾಠಕ್ಕೆಂದು ಪ್ರಾಂಶುಪಾಲರ ಮನೆಗೆ ಹೋಗುತ್ತಿದ್ದ ಅವಳು ಅವರ ಸಭ್ಯ ನಡವಳಿಕೆಯನ್ನು ಕಂಡಿದ್ದಳು. ಅವರ ಮನೆ ತೀರಾ ದೊಡ್ಡದೇನಲ್ಲ. ಆದರೂ ಅವರ ಜೀವನ ನಮ್ಮದಕ್ಕಿಂತ ಎಷ್ಟು ಚಂದ ಎಂದು ಅನಿಸಿತ್ತು ಅವಳಿಗೆ. ಸ್ಕೂಲಿನಲ್ಲಿ ದಿನವೂ ಬೋರ್ಡ್ ಮೇಲೆ ಚೆಂದದ ಸುಭಾಷಿತಗಳನ್ನು ಬರೆಯುತ್ತಿದ್ದಳು. ಅವನ್ನು ಟೀಚರ್ ಹೇಳಿಕೊಡುತ್ತಿದ್ದರು, ಅರ್ಥ ಬಿಡಿಸಿ ಹೇಳುತ್ತಿದ್ದರು. ಅವೆಲ್ಲವನ್ನೂ ಆಕೆ ನೋಟ್‌ಬುಕ್‌ನಲ್ಲಿನ ಮೊದಲ ಪುಟದಲ್ಲಿ ಬರೆದಿಟ್ಟುಕೊಂಡಿದ್ದಳು.

ಎಂದಿನಂತೆ ಬೆಳಗ್ಗೆ ಎದ್ದು, ಮುಖ ತೊಳೆದು, ಟೀ ಕುಡಿದು ಸ್ಕೂಟರಿನಲ್ಲಿ ಅಪ್ಪ ಅಮ್ಮನ ನಡುವೆ ಕೂತು ಮಾರ್ಕೆಟ್ಟಿಗೆ ಹೋಗುತ್ತಿದ್ದರೆ, ಕಿವಿಗೆ ಹತ್ತಿ ಇಟ್ಟುಕೊಂಡು, ಸ್ವೆಟರ್ ತೊಟ್ಟಿದ್ದರೂ ಸಣ್ಣ ಸಣ್ಣ ರಂಧ್ರಗಳಿಂದ ನುಗ್ಗುತ್ತಿದ್ದ ಚಳಿಗಾಳಿ ಮೈಯನ್ನು ಚುಚ್ಚುತ್ತಿತ್ತು. ಅವಳಪ್ಪ ಮಾತ್ರ, 'ಬೆಂಗಳೂರಿನಲ್ಲಿ ಗಾಡಿ ಓಡಿಸಬೇಕಾದರೆ ಇಷ್ಟು ಹೊತ್ತಿಗೆ ಸರಿ. ಚಳಿ ಎನ್ನೋದು ಬಿಟ್ಟರೆ, ಟ್ರಾಫಿಕ್, ಪೊಲೀಸ್, ಸಿಗ್ನಲ್, ಶಬ್ದ ಇದ್ಯವುದೂ ಇಲ್ಲದ ಹೊತ್ತಿನಲ್ಲಿ ಗಾಡಿ ಓಡಿಸೋ ಸುಖ ಬೆಳಗಾದ ಮೇಲೆ ಇರೋದಿಲ್ಲ' ಎಂದು ಹೇಳೋದು ಮರೆಯುತ್ತಿರಲಿಲ್ಲ. ಗೋಡೆಗಳ ಮೇಲಿನ ಸಿನಿಮಾ ಪೋಸ್ಟರ್‌ಗಳನ್ನು ನೋಡುತ್ತಾ ಹೊರಟಳು. ಒಂದೆಡೆ ಅವಳ ನೆಚ್ಚಿನ ನಾಯಕಿಯ ಚಿತ್ರವಿತ್ತು. ಜೀನ್ಸ್ ಪ್ಯಾಂಟು ತೊಟ್ಟು ಕೈಯಲ್ಲಿ ಪುಸ್ತಕ ಹಿಡಿದು ಗೆಳತಿಯರೊಡನೆ ಕಾಲೇಜಿನ ಎದುರು ನಿಂತಿರುವ ಚಿತ್ರವದು. ನಾಯಕಿಯ ಜಾಗದಲ್ಲಿ ತನ್ನನ್ನು ಕಲ್ಪಿಸಿಕೊಂಡಳು. ಆ ಚಳಿಯಲ್ಲೂ ಮೈ ಮನಸ್ಸು ರೋಮಾಂಚನಗೊಂಡಿತು.

ಚಂಪಾ ಮತ್ತು ಅವರಮ್ಮನನ್ನು ಇಳಿಸಿ, ಮನೆಗೆ ಹೋಗಿ ಕಟ್ಟಿರುವ ಹೂವು ಏರಿಸಿಕೊಂಡು ಬರಲು ಅವಳಪ್ಪ ಹೋಗುತ್ತಿದ್ದಂತೆ, ತಮ್ಮ ಎಂದಿನ ಜಾಗದಲ್ಲಿ ಹೋಗಿ ಕುಳಿತುಕೊಂಡರು. ಅವಳಮ್ಮ ಸಂಚಿಯಿಂದ ಎರಡೆಲೆ ತೆಗೆದು ಅದನ್ನು ಸೀರೆಗೆ ಒರೆಸಿ ಶುಭ್ರ ಮಾಡಿ, ಸುಣ್ಣ ಹಚ್ಚಿ, ಕಡ್ಡಿಪುಡಿ ತುಂಬಿಸಿ ತನ್ನ ಎಡಗಡೆಯ ದವಡೆಯ ಮೇಲಿಟ್ಟು ಜಗಿಯತೊಡಗಿದಳು. ಚಂಪಾ ಅಮ್ಮನ ಹೆಗಲಿಗೆ ಒತ್ತಿಕೊಂಡು ಮಲಗುವ ಪ್ರಯತ್ನ ಮಾಡುತ್ತಿದ್ದಳು. ಚಂಪಾಳ ತಮ್ಮನ ವಯಸ್ಸಿನ ಮಂಜ ಟೀ